**ಕರ್ನಾಟಕ ಸರ್ಕಾರ**
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಫ್ಲಾಟ್ ನಂ. 1,2,3,4, ಕೆ.ಎಸ್.ಐ.ಐ.ಡಿ.ಸಿ, ರಾಜಾಜಿನಗರ ಐಟಿ ಪಾರ್ಕ್
5ನೇ ಮಹಡಿ, ಸೌತ್ ಬ್ಲಾಕ್, ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್, ಬೆಂಗಳೂರು-10
ದೂರವಾಣಿ ಸಂಖ್ಯೆ: 080-22372738, ಈ-ಮೇಲ್ : karnregs@gmail.com

ಆರ್‌ಡಿಸಿ-ಇಜಿಎಸ್/22/2022 ದಿನಾಂಕ: 20-06-2022

ಇವರಿಗೆ,
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

**ವಿಷಯ:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಸ್ವಸಹಾಯ ಸಂಘಗಳ ಮೂಲಕ ನರ್ಸರಿ ಅಭಿವೃದ್ಧಿ ಹಾಗೂ ಕೃಷಿ ಪೌಷ್ಠಿಕ ತೋಟ ಅನುಷ್ಠಾನದ ಕಾಲಮಿತಿ ವೇಳಾಪಟ್ಟಿ ಕುರಿತು.

**ಉಲ್ಲೇಖ:**
1. ಈ ಕಛೇರಿಯ ಪತ್ರ ಸಂಖ್ಯೆ: RDC-EGS/22/2022 ದಿನಾಂಕ: 18-04-2022
2. ಜಂಟಿ ಸುತ್ತೋಲೆ ಪತ್ರ ಸಂಖ್ಯೆ: ಕೆಎಸ್‌ಆರ್‌ಎಲ್‌ಪಿಎಸ್/ ಎಫ್‌ಎಲ್‌ಎಚ್/ ಉಖಾಯೋ/ 06/20-21 ದಿನಾಂಕ: 18-05-2022

*******

ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ನರೇಗಾ ಯೋಜನೆಯಡಿ ಜೀವನೋಪಾಯ ವೈಯಕ್ತಿಕ ಕಾಮಗಾರಿಗಳಾದ ಕೃಷಿ, ತೋಟಗಾರಿಕೆ, ರೇಷ್ಮೆ, ಕೃಷಿಅರಣ್ಯ, ಮತ್ತು ಪಶು ಸಂಗೋಪನೆ ಹಾಗೂ ಸಮುದಾಯ ಚಟುವಟಿಕೆಗಳಾದ ಅರಣ್ಯೀಕರಣ, ರಸ್ತೆ ಬದು ನೆಡುತೋಪು, ಇತ್ಯಾದಿಗಳನ್ನು ಅನುಷ್ಠಾನಗೊಳಿಸಲು ಕ್ಲಸ್ಟರ್ ಮಟ್ಟದ ಒಕ್ಕೂಟಗಳನ್ನು (CLF) ಕಾರ್ಯಕ್ರಮ ಅನುಷ್ಠಾನ ಸಂಸ್ಥೆಯನ್ನಾಗಿ (PIA) ಪರಿಗಣಿಸುವಂತೆ ತಿಳಿಸಿರುತ್ತಾರೆ. ನರೇಗಾ ಯೋಜನೆಯಡಿ ಅರ್ಹ ವೈಯಕ್ತಿಕ ಫಲಾನುಭವಿಗಳ ಜಮೀನುಗಳಲ್ಲಿ ಕನಿಷ್ಠ ಶೇ. 20% ಜಾಗದಲ್ಲಿ ತೋಟಗಾರಿಕೆ ಬೆಳೆಗಳಿಗೆ ವಿಶೇಷ ಆದ್ಯತೆ ನೀಡಿ ಅಭಿವೃದ್ಧಿ ಪಡಿಸಲು ಸೂಚಿಸಲಾಗಿರುತ್ತದೆ

ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ನರೇಗಾ ವಾರ್ಷಿಕ ಪ್ರಧಾನ ಸುತ್ತೋಲೆ 2020-21ರ ಕಂಡಿಕೆ 7.2.1(19) ರಲ್ಲಿ ನರ್ಸರಿಗಳನ್ನು ವೈಯಕ್ತಿಕ/ಸಮುದಾಯ/ಗುಂಪುಗಳಿಂದ ಅಭಿವೃದ್ಧಿಪಡಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

ದಿನಾಂಕ: 09-11-2021 ರಂದು ಮಾನ್ಯ ಸಚಿವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ರೇಷ್ಮೆ, ಅರಣ್ಯ ಹಾಗೂ ತೋಟಗಾರಿಕೆ ಸಸಿಗಳನ್ನು ಸ್ವಸಹಾಯ ಸಂಘಗಳ ಮೂಲಕ ಉತ್ಪಾದನೆ ಮಾಡಲು ಅಗತ್ಯ ಕ್ರಮವಹಿಸಲು ಸೂಚಿಸಿರುತ್ತಾರೆ. ಪ್ರತಿ ತಾಲ್ಲೂಕು ಮಟ್ಟದಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಸಂಸ್ಥೆಯಡಿ (NRLM) ರಚಿತವಾಗಿರುವ ಗ್ರಾಮ ಪಂಚಾಯತಿ ಮಟ್ಟದ ಸ್ವಸಹಾಯ ಸಂಘಗಳ ಒಕ್ಕೂಟದಿಂದ (GPLF) ನರ್ಸರಿ ಅಭಿವೃದ್ಧಿಪಡಿಸಲು ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದಿಂದ ಉಲ್ಲೇಖ-1 ರಂತೆ ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ.

ದಿನಾಂಕ: 28-01-2022 ರಂದು ನಡೆದ ವಿಡಿಯೋ ಸಂವಾದದಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ನರೇಗಾ ಯೋಜನೆಯ ಜಂಟಿ ಕಾರ್ಯದರ್ಶಿಗಳು ವಿಸ್ತೃತವಾಗಿ ನರೇಗಾ ಯೋಜನೆಯ ಅನುಷ್ಠಾನದಲ್ಲಿ ಕ್ಲಸ್ಟರ್ ಮಟ್ಟದ ಒಕ್ಕೂಟಗಳನ್ನು ಕಾರ್ಯಕ್ರಮ ಅನುಷ್ಠಾನ ಸಂಸ್ಥೆಯನ್ನಾಗಿ ಪರಿಗಣಿಸಿ ಕ್ರಮವಹಿಸುವ ಬಗ್ಗೆ ಸೂಚಿಸಿರುತ್ತಾರೆ. ಕ್ಲಸ್ಟರ್ ಮಟ್ಟದ ಒಕ್ಕೂಟಗಳ ಪಾತ್ರ, ಫಲಾನುಭವಿಗಳ ಆಯ್ಕೆ, ಅಂದಾಜು ಪಟ್ಟಿಗಳ ತಯಾರಿಕೆ, ಅಳತೆ ಪುಸ್ತಕ ದಾಖಲು, ದಾಖಲಾತಿಗಳ ಸುಪರ್ಧಿ, ನಿಗದಿತ ಅವಧಿಯಲ್ಲಿ ಎನ್‌ಎಮ್‌ಆರ್ ಪಾವತಿ ಕುರಿತು ವಿವರಿಸಿರುತ್ತಾರೆ. ಕ್ಲಸ್ಟರ್ ಮಟ್ಟದ ಒಕ್ಕೂಟಗಳನ್ನು ಕಾರ್ಯಕ್ರಮ ಅನುಷ್ಠಾನ ಸಂಸ್ಥೆಯನ್ನಾಗಿ ಪರಿಗಣಿಸಿದ ನಂತರ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಸಂಸ್ಥೆಯ TPM ಮತ್ತು DPM ಗಳ ಪಾತ್ರ, ಜಿಲ್ಲೆಯ ತಾಂತ್ರಿಕ ಅನುಷ್ಠಾನ ಇಲಾಖೆಗಳಾದ ಕೃಷಿ, ತೋಟಗಾರಿಕೆ, ಅರಣ್ಯ, ರೇಷ್ಮೆ ಇಲಾಖೆ ಹಾಗೂ ತಾಂತ್ರಿಕ ಪರಿಣಿತಿ ಹೊಂದಿದ CSO ಇದ್ದಲ್ಲಿ ಅವುಗಳ ಮೂಲಕ ಎಲ್ಲಾ ಕ್ಲಸ್ಟರ್ ಮಟ್ಟದ ಒಕ್ಕೂಟಗಳ ಸದಸ್ಯರುಗಳಿಗೆ ಹಾಗೂ TPM ಮತ್ತು DPM ಗಳಿಗೆ ನರೇಗಾ ಯೋಜನೆಯ ಅನುಷ್ಠಾನ ಹಾಗೂ ನರ್ಸರಿ ಅಭಿವೃದ್ಧಿ ಕುರಿತು ತರಬೇತಿ ಆಯೋಜಿಸಲು ಸೂಚಿಸಿರುತ್ತಾರೆ.

ರಾಜ್ಯದ ಗ್ರಾಮೀಣ ಪ್ರದೇಶದ ದುರ್ಬಲ ಕುಟುಂಬದ ಮಹಿಳೆ ಮತ್ತು ಮಕ್ಕಳ ಅಪೌಷ್ಠಿಕತೆ ನಿವಾರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರವು ಅವಿರತವಾಗಿ ಶ್ರಮಿಸುತ್ತಿದ್ದು ಈ ಹಿನ್ನಲೆಯಲ್ಲಿ ಡೇ-ಎನ್‌ಆರ್‌ಎಲ್‌ಎಮ್, ಎಂಜಿಎನ್‌ಆರ್‌ಇಜಿಎ ಮತ್ತು ತೋಟಗಾರಿಕೆ ಇಲಾಖೆ ಸಹಯೋಗದಲ್ಲಿ ಒಗ್ಗೂಡಿಸುವಿಕೆ ಮೂಲಕ ಪ್ರತಿ ಪಂಚಾಯತಿ ವ್ಯಾಪ್ತಿಯಲ್ಲಿ 101 ವೈಯಕ್ತಿಕ ಕೃಷಿ ಪೌಷ್ಠಿಕ ತೋಟ ಒಟ್ಟಾರೆ ರಾಜ್ಯದ್ಯಾಂತ 6 ಲಕ್ಷ ಪೌಷ್ಠಿಕ ತೋಟವನ್ನು ಅನುಷ್ಠಾನಕ್ಕೆ ಕ್ರಮವಹಿಸಲು ಉಲ್ಲೇಖ ೨ ರಂತೆ ಜಂಟಿ ಸುತ್ತೋಲೆಯನ್ನು ನೀಡಲಾಗಿದೆ.

**ಅನುಷ್ಠಾನ ಕ್ರಮ**

a. ನರ್ಸರಿ ಅಭಿವೃದ್ಧಿ ಚಟುವಟಿಕೆಯು ಜೀವನೋಪಾಯ ಚಟುವಟಿಕೆಯಾಗಿದ್ದು, ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ವಾರ್ಷಿಕ ಪ್ರಧಾನ ಸುತ್ತೋಲೆ 2020-21ರ ಕಂಡಿಕೆ 7.2.1(19) ರಡಿ ನರ್ಸರಿಗಳನ್ನು ವೈಯಕ್ತಿಕ/ಸಮುದಾಯ/ಗುಂಪುಗಳಿಂದ ಅಭಿವೃದ್ಧಿಪಡಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಈ ನಿಟ್ಟಿನಲ್ಲಿ ವೈಯಕ್ತಿಕ/ಸ್ವ ಸಹಾಯ ಸಂಘಗಳು ಜೀವನೋಪಾಯ ಚಟುವಟಿಕೆಯಡಿ ನರ್ಸರಿ ಅಭಿವೃದ್ಧಿಪಡಿಸಿಕೊಳ್ಳಲು ಅರ್ಹರಾಗಿರುತ್ತಾರೆ. ಸದರಿ ನರ್ಸರಿಯಲ್ಲಿ ಅಭಿವೃದ್ಧಿಪಡಿಸುವ ಸಸಿಗಳನ್ನು ಫಲಾನುಭವಿಗಳು ಇಲಾಖಾ ಮಾರಾಟ ದರಪಟ್ಟಿಯಂತೆ ಫಲಾನುಭವಿಗಳಿಗೆ ಮಾರಾಟ ಮಾಡಿ ಆದಾಯಗಳಿಸಬಹುದು.

b. ಬೇಡಿಕೆ, ಸ್ಥಳೀಯ ಹವಾಮಾನ ಮತ್ತು ಮಾರುಕಟ್ಟೆಗೆ ಅನುಗುಣವಾಗಿ ವೈಜ್ಞಾನಿಕ ರೀತಿಯಲ್ಲಿ ವಿವಿಧ ಜಾತಿಯ ತಳಿಗಳನ್ನು ಬೆಳೆಸಲು CLF ಗಳು ಕೃಷಿ, ಅರಣ್ಯ, ರೇಷ್ಮೆ ಮತ್ತು ತೋಟಗಾರಿಕೆ ಇಲಾಖೆಗಳೊಂದಿಗೆ ಸಂವಹನ ನಡೆಸಲು ಅಗತ್ಯ ಕ್ರಮವಹಿಸುವುದು.

c. ವೈಯಕ್ತಿಕ ಕಾಮಗಾರಿಯಲ್ಲಿ ಕೆಲಸ ಮಾಡಲು ಬಯಸುವ ಫಲಾನುಭವಿಗಳು ನಮೂನೆ 06 ರಲ್ಲಿ ಕೆಲಸದ ಬೇಡಿಕೆಯನ್ನು ಕ್ಲಸ್ಟರ್ ಮಟ್ಟದ ಒಕ್ಕೂಟಗಳಿಗೆ (CLF) ಸಲ್ಲಿಸುವುದು. ಸದರಿ ಅರ್ಜಿಗಳನ್ನು ಕ್ಲಸ್ಟರ್ ಮಟ್ಟದ ಒಕ್ಕೂಟವು (CLF) ತಾಲ್ಲೂಕು ಮಟ್ಟದ ನರೇಗಾ ಕಾರ್ಯಕ್ರಮ ಅಧಿಕಾರಿಗೆ ಸಲ್ಲಿಸುವುದು. ತದನಂತರ ಅರ್ಜಿಗಳನ್ನು ನರೇಗಾ ಮಾರ್ಗಸೂಚಿಯನ್ವಯ ಪರಿಶೀಲಿಸಿ ಅರ್ಹ ಫಲಾನುಭವಿಗಳಿಗೆ ಕೆಲಸ ನೀಡುವುದು.

d. ವಾರಕ್ಮೊಮ್ಮೆ ಕೆಲಸದ ವಿವರವನ್ನು ದಾಖಲಿಸುವುದು ಮತ್ತು ಕೆಲಸದ ಗುಣಮಟ್ಟವನ್ನು ಖಾತ್ರಿ ಪಡಿಸಿಕೊಳ್ಳುವುದು, ಕೆಲಸ ಪ್ರಮಾಣದ ವಿವರವನ್ನು ದಾಖಲಿಸುವ ಪುಸ್ತಕವನ್ನು ನೋಡಿಕೊಳ್ಳುವುದು ಕಿರಿಯ ತಾಂತ್ರಿಕ ಸಹಾಯಕರ/ಇಂಜಿನಿಯರ್‌ಗಳ ಕರ್ತವ್ಯವಾಗಿರುತ್ತದೆ. ನರೇಗಾ ಕಾರ್ಯಕ್ರಮ ಅಧಿಕಾರಿಗಳು ಬಿಲ್ ಪಾವತಿಗೂ ಮುನ್ನ ಬಿಲ್ ಓಚರ್, ಹಾಜರಾತಿ ಪಟ್ಟಿ, ಅಳತೆಯ ಪುಸ್ತಕಗಳ ದಾಖಲಾತಿಗಳನ್ನು ಕ್ಲಸ್ಟರ್ ಮಟ್ಟದ ಒಕ್ಕೂಟದ (CLF) ಅಧ್ಯಕ್ಷರು/ಕಾರ್ಯದರ್ಶಿಗಳಿಂದ ದೃಢೀಕರಿಸಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.

e. ತಾಲ್ಲೂಕು ಕಾರ್ಯಕ್ರಮ ಅಧಿಕಾರಿಗಳು ಇ-ಎನ್‌ಎಮ್‌ಆರ್‌ಗಳನ್ನು ಸೃಜಿಸುವುದು, CLF ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಎನ್‌ಎಮ್‌ಆರ್‌ಗಳನ್ನು ಭರ್ತಿ ಮಾಡಿ, ಅಧ್ಯಕ್ಷರ ಹಾಗೂ ಕಾರ್ಯದರ್ಶಿಗಳು ಜಂಟಿಯಾಗಿ ದೃಢೀಕರಿಸುವುದು.

f. ಸದರಿ ದೃಢೀಕೃತ ಎನ್‌ಎಮ್‌ಆರ್‌ಗೆ 1st Signatory ತಾಲ್ಲೂಕು ಸಹಾಯಕ ನಿರ್ದೇಶಕರು (AD) ನೀಡಲಿದ್ದು 2nd Signatory ಕಾರ್ಯನಿರ್ವಾಹಕ ಅಧಿಕಾರಿಗಳು (EO) ನೀಡಿ ನಿಗದಿತ ಅವಧಿಯೊಳಗೆ ಕೂಲಿ ಪಾವತಿಸುವುದು.

g. ವೈಯಕ್ತಿಕ ಕಾಮಗಾರಿಗಳ ಫಲಾನುಭವಿಗಳ ಗುರುತಿಸುವಿಕೆ ಕಾಮಗಾರಿಗಳ ಅನುಷ್ಠಾನ ಮೇಲ್ವಿಚಾರಣೆ, ತಾಂತ್ರಿಕ ಅಂದಾಜು ಪಟ್ಟಿ ತಯಾರಿಸುವುದು, ಅಳತೆ ಪುಸ್ತಕದಲ್ಲಿ ದಾಖಲಿಸುವುದು, ಎನ್‌ಎಮ್‌ಆರ್‌ಗಳನ್ನು ದೃಢೀಕರಿಸುವುದು ಹಾಗೂ ದಾಖಲಾತಿಗಳನ್ನು ಕ್ಲಸ್ಟರ್ ಮಟ್ಟದ ಒಕ್ಕೂಟಗಳ (CLF) ಹಂತದಲ್ಲಿ ಪರಿಣಾಮಕಾರಿಯಾಗಿ ನಿರ್ವಹಿಸುವುದು.

h. ಕ್ಲಸ್ಟರ್ ಮಟ್ಟದ ಒಕ್ಕೂಟಗಳ (CLF) ಗಳನ್ನು ನರೇಗಾ ಯೋಜನೆಯಡಿ ಅನುಷ್ಠಾನ ಸಂಸ್ಥೆಯಾಗಿ ಪರಿಗಣಿಸಿದ ನಂತರ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅನುಷ್ಠಾನ ಮಾರ್ಗಸೂಚಿಗಳಿಗೆ ಹಾಗೂ ನಿಯಮ ನಿಬಂಧನೆಗಳ ಉತ್ತರದಾಯಿತ್ವಕ್ಕೆ CLFಗಳು ಸಂಪೂರ್ಣ ಹೊಣೆಗಾರರು.

i. ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು (EO) ಕ್ಲಸ್ಟರ್ ಮಟ್ಟದ ಒಕ್ಕೂಟಗಳು (CLF) ನರೇಗಾ ಯೋಜನೆಯಡಿ ಅನುಷ್ಠಾನಿಸುವ ಕಾಮಗಾರಿಗಳಿಗೂ ಕಾರ್ಯಕ್ರಮ ಅಧಿಕಾರಿಗಳಾಗಿರುತ್ತಾರೆ.

j. ತರಬೇತಿ ಮತ್ತು Capacity Building ಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಕೈಗೊಳ್ಳಲು ವಿಸ್ತೃತ ವೇಳಾಪಟ್ಟಿಯನ್ನು ಎನ್‌ಆರ್‌ಎಲ್‌ಎಮ್ DPM ಮತ್ತು TPM ಗಳು ಸಿದ್ಧಪಡಿಸಿಕೊಂಡು ಆಯಾ ಜಿಲ್ಲೆಗಳ ಜಿಲ್ಲಾ ಪಂಚಾಯತಿ ಉಪ ಕಾರ್ಯದರ್ಶಿಗಳು, ಕೃಷಿ ಇಲಾಖೆ, ತೋಟಗಾರಿಕೆ ಇಲಾಖೆ, ಅರಣ್ಯ ಇಲಾಖೆ ಹಾಗೂ ರೇಷ್ಮೆ ಇಲಾಖೆಯ ಸಹಯೋಗದೊಂದಿಗೆ ಕ್ರಮವಹಿಸುವುದು.

k. ಈಗಾಗಲೇ ಎನ್‌ಆರ್‌ಎಲ್‌ಎಮ್‌ಅಡಿ ಕಾರ್ಯ ನಿರ್ವಹಿಸುತ್ತಿರುವ ತಾಲ್ಲೂಕು ಎಮ್‌ಐಎಸ್ ಸಂಯೋಜಕರು/ಗಣಕಯಂತ್ರ ನಿರ್ವಾಹಕರಿಗೆ ನರೇಗಾ ಎಮ್‌ಐಎಸ್ ಹಾಗೂ ತಾಂತ್ರಿಕ ವಿಷಯಗಳ ಬಗ್ಗೆ ತರಬೇತಿಯನ್ನು ಆಯೋಜಿಸಲು ತಾಲ್ಲೂಕು ಕಾರ್ಯಕ್ರಮ ಅಧಿಕಾರಿಗಳು (EO) ಕ್ರಮವಹಿಸುವುದು. ಈ ಕುರಿತು DPM ಮತ್ತು TPM ರವರು ಅಗತ್ಯ ಸಹಕಾರ ನೀಡುವುದು.

l. ತಾಲ್ಲೂಕು ಎಮ್‌ಐಎಸ್ ಸಂಯೋಜಕರಿಗೆ ತರಬೇತಿ ನೀಡುವ ಮೊದಲು ಎಮ್‌ಐಎಸ್ ತಂತ್ರಾಂಶದಲ್ಲಿ ಕಡ್ಡಾಯವಾಗಿ ನೊಂದಣಿ ಮಾಡಿಕೊಳ್ಳುವುದು.

m. CLFಗಳು ಅನುಷ್ಠಾನಿಸಿದ ಕಾಮಗಾರಿಗಳನ್ನು ಕಡ್ಡಾಯವಾಗಿ ಸಾಮಾಜಿಕ ಲೆಕ್ಕ ಪರಿಶೋಧನೆಗೆ ಒಳಪಡಿಸುವುದು

**ಕಾಲಮಿತಿ ವೇಳಾ ಪಟ್ಟಿ**

| ಕ್ರ.ಸಂ. | ಚಟುವಟಿಕೆಗಳು | ಅವಧಿ |
|---|---|---|
| 1 | GPLF/SHG ಗುಂಪುಗಳ ಆಯ್ಕೆ ಮತ್ತು ನರ್ಸರಿ ತರಬೇತಿ. | 20 ಜೂನ್ ರೊಳಗಾಗಿ (ಈಗಾಗಲೇ ಸುತ್ತೋಲೆ ನೀಡಲಾಗಿದೆ) |
| 2 | GPLFನರ್ಸರಿ ಹಾಗೂ ಕೃಷಿ ಪೌಷ್ಠಿಕ ತೋಟದ ಕ್ರಿಯಾ ಯೋಜನೆ ಅನುಮೋದನೆ | 25 ಜೂನ್ ರೊಳಗಾಗಿ |
| 3 | ಅಂದಾಜು ಪಟ್ಟಿ ತಯಾರಿಕೆ (ತೋಟಗಾರಿಕೆ ಇಲಾಖೆಯ ದರಪಟ್ಟಿಯನ್ವಯ) ಹಾಗೂ ತಾಂತ್ರಿಕ ಮಂಜೂರಾತಿ | 27 ಜೂನ್ ರೊಳಗಾಗಿ |
| 4 | ಎನ್.ಎಮ್.ಆರ್ ಸೃಜನೆ ಮತ್ತು ಕಾಮಗಾರಿ ಪ್ರಾರಂಭ. | 27 ಜೂನ್ ರೊಳಗಾಗಿ |
| 5 | ನರೇಗಾ ಯೋಜನೆಯ ಒಗ್ಗೂಡಿಸುವಿಕೆಯಡಿ ವಿವಿಧ ಅನುಷ್ಠಾನ ಇಲಾಖೆಗಳು ಅನುಷ್ಠಾನಗೊಳಿಸುವ ಚಟುವಟಿಕೆಗಳಿಗೆ ಸಸಿಗಳ ಸರಬರಾಜು ಬಗ್ಗೆ ಅನುಷ್ಠಾನ ಇಲಾಖೆಗಳೊಂದಿಗೆ (ತೋಟಗಾರಿಕೆ, ರೇಷ್ಮೆ, ಅರಣ್ಯ ಹಾಗೂ ಗ್ರಾಮ ಪಂಚಾಯತಿ) ಒಡಂಬಡಿಕೆ ಮಾಡಿಕೊಳ್ಳುವುದು. | ಜುಲೈ ಮೊದಲನೇ ವಾರ |
| 6 | ಕೃಷಿ ಪೌಷ್ಠಿಕ ತೋಟದ ಮಹತ್ವ ಕುರಿತು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ವ್ಯಾಪಕ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು (ತಾಲ್ಲೂಕು ಐಇಸಿ ಸಂಯೋಜಕರು | ಜುಲೈ ಮೊದಲನೇ ಮತ್ತು ಎರಡನೇ ವಾರ |
| 7 | ಕೃಷಿ ಪೌಷ್ಠಿಕ ತೋಟ ಅಭಿಯಾನಕ್ಕೆ ಗ್ರಾಮ ಪಂಚಾಯತಿವಾರು 101 ಫಲಾನುಭವಿಗಳನ್ನು ಆಯ್ಕೆ ಮಾಡುವುದು, ಹಾಗೂ ಅಂದಾಜು ಪಟ್ಟಿಯನ್ನು ತಯಾರಿಸಿ ಅಗತ್ಯ ಅನುಮೋದನೆಗಳನ್ನು ನೀಡುವುದು. | ಜುಲೈ ಮೂರನೇ ಮತ್ತು ನಾಲ್ಕನೇ ವಾರ |

| | | |
|---|---|---|
| 8 | ಕೃಷಿ ಪೌಷ್ಠಿಕ ತೋಟಕ್ಕೆ ಬೇಕಾಗುವ ಕಸಿ/ಸಸಿಗಳ ಸಂಗ್ರಹಣೆ ಹಾಗೂ (SHGಗಳ ನರ್ಸರಿ, ಇಲಾಖಾ ನರ್ಸರಿ ಹಾಗೂ ಖರೀದಿ ಪ್ರಕ್ರಿಯೆ) ಪೂರ್ವ ಸಿದ್ದತೆ | ಆಗಸ್ಟ ಮೊದಲನೇ ಮತ್ತು ಎರಡನೇ ವಾರ |
| 9 | ಕೃಷಿ ಪೌಷ್ಠಿಕ ತೋಟಗಳ ಅನುಷ್ಠಾನ | ಆಗಸ್ಟ ಮೂರನೇ ವಾರದಿಂದ |

**ಹೆಚ್ಚುವರಿ ಮಾರ್ಗಸೂಚಿಗಳು**

1. ನರೇಗಾ ಯೋಜನೆಯಡಿ ಸ್ವ ಸಹಾಯಕ ಸಂಘಗಳ ಮೂಲಕ ನರ್ಸರಿಗಳನ್ನು ಅಭಿವೃದ್ಧಿಪಡಿಸಲು ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನು ಉಪಯೋಗಿಸಿ ಕಡಿಮೆ ವೆಚ್ಚದಲ್ಲಿ ನೆರಳು ಪದರ ಉಪಯೋಗಿಸಿ ಶೇಡ್‌ಹೌಸ್ ನಿರ್ಮಾಣ ಮಾಡುವುದು.
2. ನರ್ಸರಿ ನಿರ್ವಹಣೆಗೆ ಅವಶ್ಯವಿರುವ ನೀರಾವರಿ ಸೌಲಭ್ಯ, ಹೋಸ್ ಪೈಪುಗಳು, ಕ್ಯಾನ್ ಇತ್ಯಾದಿಗಳನ್ನು ಖರೀದಿಸುವುದು.
3. ಸಸ್ಯೋತ್ಪಾದನೆಗೆ ಅವಶ್ಯವಿರುವ ಸಾಮಗ್ರಿಗಳನ್ನು (Secateurs, Budding Knife, Tarpaulin, Polythene Bags, FYM, red soil, sand ಬಿತ್ತನೆ ಬೀಜ/ಕಡ್ಡಿ, ನಿರ್ವಹಣೆ ಇತರೆ) ಅಂದಾಜು ಪಟ್ಟಿಯಲ್ಲಿ ಅಳವಡಿಸಿ ಅನುಷ್ಠಾನಗೊಳಿಸುವುದು.
4. ನರೇಗಾ ಯೋಜನೆಯಡಿ ಸ್ವ ಸಹಾಯ ಸಂಘಗಳ ಮೂಲಕ ಅನುಷ್ಠಾನಗೊಳಿಸಲಾದ ನರ್ಸರಿಗಳಲ್ಲಿ ನರೇಗಾ ಯೋಜನೆಯಡಿ ಅನುಮತಿಸಿದ ಬಹುವಾರ್ಷಿಕ ತೋಟಗಾರಿಕೆ/ಅರಣ್ಯ/ಹಿಪ್ಪುನೇರಳೆ ಸಸಿಗಳನ್ನು ಸುತ್ತೋಲೆಯಲ್ಲಿ ನಿಗಧಿಪಡಿಸಿರುವ ಪ್ರಮಾಣದಲ್ಲಿ ಕಡ್ಡಾಯವಾಗಿ ಉತ್ಪಾದಿಸಲು ಕ್ರಮ ವಹಿಸುವುದು.
5. ಸ್ವ ಸಹಾಯ ಸಂಘದ ನರ್ಸರಿಗಳಲ್ಲಿ ಸದಸ್ಯರು ಇಚ್ಛಿಸಿದ್ದಲ್ಲಿ ಸ್ಥಳೀಯ ಬೇಡಿಕೆಗಳಿದ್ದಲ್ಲಿ ಹೆಚ್ಚುವರಿಯಾಗಿ ಸ್ವಂತ ಖರ್ಚಿನಲ್ಲಿ ತರಕಾರಿ ಸಸಿಗಳನ್ನು ಉತ್ಪಾದಿಸಿಕೊಳ್ಳಬಹುದಾಗಿದೆ.

21/06/20

ಆಯುಕ್ತರು ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪ್ರತಿಯನ್ನು:

1. ಅಪರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಭವನ ಬೆಂಗಳೂರು.
2. ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ರೇಷ್ಮೆ ನಿರ್ದೇಶಕರು, ಬೆಂಗಳೂರು.
3. ಅಭಿಯಾನ ನಿರ್ದೇಶಕರು ಸಂಜೀವಿನಿ – ಕೆಎಸ್ ಆರ್‌ಎಲ್‌ಪಿಎಸ್ ಕೌ.ಉ ಮತ್ತು ಜೀವನೋಪಾಯ ಇಲಾಖೆ
4. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್ ಬೆಂಗಳೂರು.